ದೂರವಾಣಿ ಸಂ. : 080 2956 2046

# ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ

ಎಸ್.ಎನ್. ಕಾಂಪ್ಲೆಕ್ಸ್, ಮೊದಲನೇ ಮಹಡಿ, ನಗರ ಪೋಲಿಸ್ ಠಾಣೆ ಎದುರು, 'ಡಿ' ಕ್ರಾಸ್, ದೊಡ್ಡಬಳ್ಳಾಪುರ-561203.

ಸಂಖ್ಯೆ: DPA/TP/RGHCL/CC/42/2021-22/352-1 ದಿನಾಂಕ: 02 SEP 2021

ನಮೂನೆ-III

ನಿಯಮ-35

ಕಟ್ಟಡ ಪ್ರಾರಂಭಿಕ ಪ್ರಮಾಣ ಪತ್ರ

ವಿಷಯ: ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಉತ್ತರ (ಅಪರ) ತಾಲ್ಲೂಕು, ಹೆಸರಘಟ್ಟ ಹೋಬಳಿ, ಸಾದೇನಹಳ್ಳಿ ಗ್ರಾಮದ ಸರ್ವೆ ನಂ. 30 ರಲ್ಲಿ 1ಎಕರೆ 29ಗುಂಟೆ ವಿಸ್ತೀರ್ಣದ ಪ್ರದೇಶದಲ್ಲಿ ಅನುಮೋದಿಸಲಾಗಿರುವ ಏಕ ನಿವೇಶನ ವಿನ್ಯಾಸ ನಕ್ಷೆಯಲ್ಲಿ ರಾಜೀವ್ ಗಾಂಧಿ ವಸತಿ ನಿಗಮವು ನಿರ್ಮಿಸಲು ಉದ್ದೇಶಿಸಲಾದ (ಜಿ+3) ಮಾದರಿಯ 125 ಸಂಖ್ಯೆ 1 ಬಿ.ಹೆಚ್.ಕೆ ವಸತಿ ಘಟಕಗಳನ್ನು ನಿರ್ಮಿಸಲು ಪ್ರಾಧಿಕಾರದಿಂದ ಪ್ರಾರಂಭಿಕ ಪ್ರಮಾಣ ಪತ್ರ ನೀಡಲು ಕೋರಿರುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಅಧಿಸೂಚನೆ ಸಂಖ್ಯೆ: UDD 10 TTP 2018 ದಿನಾಂಕ: 04-05-2020.
2. ಪ್ರಾಧಿಕಾರದ ಏಕ ನಿವೇಶನ ವಿನ್ಯಾಸ ಅನುಮೋದನೆ ಸಂಖ್ಯೆ: DPA/TP/RGHC1/12/2020-21/37 ದಿನಾಂಕ: 15-04-2021.
3. ಕಾರ್ಯಪಾಲಕ ಅಭಿಯಂತರರು, ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ, ಬೆಂಗಳೂರು ರವರ ಪತ್ರ ಸಂಖ್ಯೆ: RGHCL 72 OLH TECH 10 2019-20 ದಿನಾಂಕ: 24-06-2021.
4. ಪ್ರಾಧಿಕಾರದ ಶುಲ್ಕ ಪಾವತಿ ಸೂಚನಾ ಪತ್ರ ದಿನಾಂಕ: 13-07-2021.
5. ಅರ್ಜಿದಾರರು ಶುಲ್ಕಗಳನ್ನು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಎಲ್ಲೇರೆದಿಗುಡ್ಡ (ಹೈದರಾಬಾದ್) ಶಾಖೆ ಇಲ್ಲಿ ಶುಲ್ಕ ರೂ. 6,600/- ಮತ್ತು 2,66,000/- ಗಳನ್ನು ಡಿ.ಡಿ. ಸಂಖ್ಯೆ: 871878 ಮತ್ತು 871877 ಗಳನ್ವಯ ದಿನಾಂಕ: 16-07-2021 ರಂದು ಪಾವತಿಸಿರುತ್ತಾರೆ. ಪ್ರಾಧಿಕಾರದ ರಸೀದಿ ಸಂಖ್ಯೆ: 1076 ಮತ್ತು 1075 ಗಳಲ್ಲಿ ದಿನಾಂಕ: 13-08-2021 ರಂದು ದಾಖಲಿಸಿದೆ.

EE/EE-1 for n/a

*****

ಕಾರ್ಯಪಾಲಕ ಅಭಿಯಂತರರು, ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ, ಬೆಂಗಳೂರು ರವರು ಉಲ್ಲೇಖ (3) ರಲ್ಲಿ ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಉತ್ತರ (ಅಪರ) ತಾಲ್ಲೂಕು, ಹೆಸರಘಟ್ಟ ಹೋಬಳಿ, ಸಾದೇನಹಳ್ಳಿ ಗ್ರಾಮದ ಸರ್ವೆ ನಂ. 30 ರಲ್ಲಿ 1ಎಕರೆ 29ಗುಂಟೆ ವಿಸ್ತೀರ್ಣದ ಪ್ರದೇಶದಲ್ಲಿ ಉಲ್ಲೇಖ (2) ರನ್ವಯ ಅನುಮೋದಿಸಲಾಗಿರುವ ಏಕ ನಿವೇಶನ ವಿನ್ಯಾಸ ನಕ್ಷೆಯಲ್ಲಿ ರಾಜೀವ್ ಗಾಂಧಿ ವಸತಿ ನಿಗಮವು ನಿರ್ಮಿಸಲು ಉದ್ದೇಶಿಸಲಾದ (ಜಿ+3) ಮಾದರಿಯ 125 ಸಂಖ್ಯೆ 1 ಬಿ.ಹೆಚ್.ಕೆ ವಸತಿ ಘಟಕಗಳನ್ನು ನಿರ್ಮಿಸಲು ಪ್ರಾಧಿಕಾರದಿಂದ ಪ್ರಾರಂಭಿಕ ಪ್ರಮಾಣ ಪತ್ರ ನೀಡಲು ಕೋರಲಾಗಿರುವ ಹಿನ್ನೆಲೆಯಲ್ಲಿ ಉದ್ದೇಶಿತ ಕಟ್ಟಡಕ್ಕೆ ಸಲ್ಲಿಸಲಾದ ನೀಲಿ ನಕ್ಷೆಯನ್ನು ಉಲ್ಲೇಖ (1) ರ ಸರ್ಕಾರದ ಅಧಿಸೂಚನೆಯಂತೆ ಹಾಗೂ ವಲಯ ನಿಯಮಾವಳಿಯಂತೆ ಪರಿಶೀಲಿಸಿ, ಉಲ್ಲೇಖ (4) ರಲ್ಲಿ ಅಗತ್ಯ ಶುಲ್ಕ ಪಾವತಿಸಲು ಸೂಚಿಸಲಾಗಿದ್ದು, ಅದರಂತೆ ಉಲ್ಲೇಖ (5) ರಲ್ಲಿ ಶುಲ್ಕ ಪಾವತಿಸಿ ಸಲ್ಲಿಸಿರುವ ನಕ್ಷೆಗಳನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 15 (1) ರನ್ವಯ ಈ ಕೆಳಕಂಡ ಷರತ್ತುಗಳಿಗೊಳಪಡಿಸಿ, **ರಾಜೀವ್ ಗಾಂಧಿ ವಸತಿ ನಿಗಮವು ನಿರ್ಮಿಸಲು ಉದ್ದೇಶಿಸಲಾದ (ಜಿ+3) ಮಾದರಿಯ 125 ಸಂಖ್ಯೆ 1 ಬಿ.ಹೆಚ್.ಕೆ ವಸತಿ ಘಟಕಗಳನ್ನು ನಿರ್ಮಿಸಲು ಉದ್ದೇಶಿಸಿರುವ** ಕಟ್ಟಡ ನಕ್ಷೆಯೊಂದಿಗೆ ಪ್ರಾರಂಭಿಕ ಪ್ರಮಾಣ ಪತ್ರ ನೀಡಲಾಗಿದೆ.

## ಷರತ್ತುಗಳು

1. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 15(1) ರಡಿ ನೀಡಲಾಗಿರುವ ಪ್ರಾರಂಭಿಕ ಪ್ರಮಾಣ ಪತ್ರವಾಗಿರುತ್ತದೆ. ಈ ಪ್ರಾರಂಭಿಕ ಪ್ರಮಾಣ ಪತ್ರವು ಮಾಲೀಕತ್ವದ ದೃಢೀಕರಣ/ರುಜುವಾತು ಪತ್ರವಾಗಿರುವುದಿಲ್ಲ.
2. ಸದರಿ ನಿವೇಶನದಲ್ಲಿ ಕಟ್ಟುವ ಕಟ್ಟಡವನ್ನು ಈ ಕಛೇರಿಯಿಂದ ಅನುಮತಿ ನೀಡಿರುವ ಉದ್ದೇಶಕ್ಕೆ ಮಾತ್ರ ಉಪಯೋಗಿಸತಕ್ಕದ್ದು ಮತ್ತು ಕಟ್ಟಡವನ್ನು ಅನುಮೋದಿತ ನಕ್ಷೆಯಂತೆ ನಿರ್ಮಿಸತಕ್ಕದ್ದು.

3. ಕಟ್ಟಡ ನಿರ್ಮಾಣವು ಜಾರಿಯಲ್ಲಿರುವ ವಲಯ ನಿಯಮಾವಳಿಗಳು ಮತ್ತು ಕಟ್ಟಡದ ವಿಧಿಗಳ ನಿಬಂಧನೆಗಳಿಗೆ ಅನುಗುಣವಾಗಿರತಕ್ಕದ್ದು.
4. ಈ ಪ್ರಾರಂಭಿಕ ಪ್ರಮಾಣ ಪತ್ರವು ಮಂಜೂರಾದ ದಿನಾಂಕದಿಂದ ಎರಡು ವರ್ಷದವರೆಗೆ ಮಾತ್ರ ಮಾನ್ಯತೆ ಹೊಂದಿರುತ್ತದೆ. ಈ ಅವಧಿ ಮುಗಿದ ನಂತರ ಹೊಸದಾಗಿ ಪ್ರಾರಂಭಿಕ ಪ್ರಮಾಣ ಪತ್ರ ಪಡೆಯದೆ ಕಟ್ಟಡ ಕಾರ್ಯವನ್ನು ಕೈಗೊಳ್ಳಬಾರದು ಹಾಗೂ ಮುಂದುವರೆಸಬಾರದು.
5. ನಿರ್ಮಾಣ ಕಾರ್ಯಕ್ಕೆ ಬಾಲ ಕಾರ್ಮಿಕರನ್ನು ನಿಯೋಜಿಸಿಕೊಳ್ಳತಕ್ಕದ್ದಲ್ಲ ಹಾಗೂ ಕಾರ್ಮಿಕ ಕಲ್ಯಾಣ ನಿಧಿಗೆ ಪಾವತಿಸಬೇಕಾದ ಶುಲ್ಕವನ್ನು ಸಂಬಂಧಪಟ್ಟ ಸ್ಥಳೀಯ ಸಂಸ್ಥೆಯಿಂದ ಪರವಾನಗಿ ಪಡೆಯುವ ಸಮಯದಲ್ಲಿ ಕಡ್ಡಾಯವಾಗಿ ಪಾವತಿಸತಕ್ಕದ್ದು.
6. ಅನುಮೋದಿತ ನಕ್ಷೆಯನ್ನು ಉಲ್ಲಂಘಿಸಿ ಕಟ್ಟಡ ಕಾರ್ಯವನ್ನು ಕೈಗೊಳ್ಳಬಾರದು ಮತ್ತು ಏನಾದರೂ ಬದಲಾವಣೆಗಳು ಅವಶ್ಯವಿದ್ದಲ್ಲಿ ಮಾರ್ಪಡಿತ ನಕ್ಷೆಗೆ ಮಂಜೂರಾತಿ ಪಡೆದು ಮುಂದುವರೆಸತಕ್ಕದ್ದು.
7. ಅನುಮೋದಿತ ಕಟ್ಟಡ ನಕ್ಷೆಯ ಒಂದು ಪ್ರತಿಯನ್ನು ಕಟ್ಟಡ ನಿರ್ಮಾಣ ಸ್ಥಳದಲ್ಲಿ ಅಧಿಕಾರಿಗಳ ಸಮೀಕ್ಷೆಗಾಗಿ ಪ್ರದರ್ಶಿಸತಕ್ಕದ್ದು.
8. ಕಟ್ಟಡ ನಿರ್ಮಾಣ ಸಾಮಾಗ್ರಿಗಳನ್ನು ರಸ್ತೆಯಲ್ಲಿ ಶೇಖರಣೆ ಮಾಡಬಾರದು, ಈ ರೀತಿ ಮಾಡಿರುವುದು ಕಂಡುಬಂದಲ್ಲಿ ಪ್ರಾರಂಭಿಕ ಪ್ರಮಾಣ ಪತ್ರವನ್ನು ರದ್ದುಪಡಿಸಲಾಗುವುದು.
9. ಕಟ್ಟಡ ನಡುಜಾಗ ಪ್ರದೇಶದಲ್ಲಿ ಗಿಡ/ಮರಗಳನ್ನು ಬೆಳೆಸತಕ್ಕದ್ದು ಹಾಗೂ ಕಸ ನಿರ್ವಹಣೆಗಾಗಿ ಸೂಕ್ತ ಕ್ರಮವಹಿಸತಕ್ಕದ್ದು.
10. ನಿವೇಶನದ ಆವರಣದೊಳಗೆ ಮಳೆ ನೀರು ಕೊಯ್ಲನ್ನು ಕಡ್ಡಾಯವಾಗಿ ಅಳವಡಿಸತಕ್ಕದ್ದು.
11. ಕಟ್ಟಡದಲ್ಲಿ ಸೋಲಾರ್ ವಾಟರ್ ಹೀಟರ್‌ನ್ನು ಕಡ್ಡಾಯವಾಗಿ ಅಳವಡಿಸತಕ್ಕದ್ದು.
12. ಸದರಿ ನಿವೇಶನಕ್ಕೆ ಸಂಬಂಧಿಸಿದಂತೆ ಸಿವಿಲ್ ವ್ಯಾಜ್ಯಗಳು ಉದ್ಭವಿಸಿದಲ್ಲಿ ನ್ಯಾಯಾಲಯದ ತೀರ್ಮಾನಕ್ಕೆ ಬದ್ಧರಾಗಿರತಕ್ಕದ್ದು.
13. ಸದರಿ ನಿವೇಶನದಲ್ಲಿ ಸರ್ಕಾರದ/ಅನ್ಯ ಖಾಸಗಿ ಜಮೀನುಗಳೇನಾದರೂ ಸೇರಿಕೊಂಡಿರುವುದು ತಿಳಿದು ಬಂದಲ್ಲಿ, ಅಂತಹ ಸಂದರ್ಭದಲ್ಲಿ ಯೋಜನಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳು ಅನುಮೋದಿತ ಕಟ್ಟಡ ನಕ್ಷೆಯನ್ನು ಮಾರ್ಪಾಡು ಮಾಡಲು ಅಥವಾ ಹಿಂತೆಗೆದುಕೊಳ್ಳಲು ಅಧಿಕಾರವುಳ್ಳವರಾಗಿರುತ್ತಾರೆ.
14. ಪ್ರಸ್ತಾವನೆಗೆ ಸಂಬಂಧಿಸಿದಂತೆ ಅರ್ಜಿದಾರರು ತಪ್ಪು ದಾಖಲೆ ಅಥವಾ ಇನ್ನಿತರೆ ಫೋರ್ಜರಿ ದಾಖಲಾತಿಗಳನ್ನು ನೀಡಿರುವುದು ರುಜುವಾತಾದಲ್ಲಿ ಈಗ ನೀಡಿರುವ ಕಟ್ಟಡ ನಕ್ಷೆ ಅನುಮೋದನೆಯು ತನ್ನಿಂದ ತಾನೇ ರದ್ದಾಗುವುದೆಂದು ಪರಿಗಣಿಸತಕ್ಕದ್ದು.
15. ಕಟ್ಟಡ ಪ್ರಾರಂಭಿಸುವ ಮುನ್ನ Structural Design ಬಗ್ಗೆ ನೋಂದಾಯಿತ Structural Consultant ರವರಿಂದ Design ಪಡೆದು ಅನುಷ್ಠಾನಗೊಳಿಸತಕ್ಕದ್ದು.
16. ಕಟ್ಟಡ ನಿರ್ಮಾಣ ಕಾರ್ಯ ಪ್ರಾರಂಭಿಸುವ ಮುನ್ನ ಸಂಬಂಧಿತ ಸ್ಥಳೀಯ ಸಂಸ್ಥೆಯಿಂದ ಪರವಾನಗಿಯನ್ನು ಪಡೆಯತಕ್ಕದ್ದು. ಸಂಬಂಧಿಸಿದ ಇತರೆ ಇಲಾಖೆ/ಮಂಡಳಿಗಳಿಂದ ಅಗತ್ಯ ನಿರಾಪೇಕ್ಷಣಾ ಪತ್ರ/ಅನುಮತಿಯನ್ನು ಪಡೆದು ಅನುಷ್ಠಾನಗೊಳಿಸತಕ್ಕದ್ದು.
17. ಯೋಜನಾ ಪ್ರಾಧಿಕಾರವು ಆಗಿಂದಾಗ್ಗೆ ವಿಧಿಸುವ ನಿಯಮಗಳು/ಷರತ್ತುಗಳಿಗೆ ಬದ್ಧರಾಗಿರತಕ್ಕದ್ದು.
18. ಮೇಲ್ಕಂಡ ಷರತ್ತುಗಳನ್ನು ಉಲ್ಲಂಘಿಸಿದ್ದಲ್ಲಿ/ಅನುಮೋದಿತ ನಕ್ಷೆಗೆ ವ್ಯತಿರಿಕ್ತವಾಗಿ ಕಟ್ಟಡ ನಿರ್ಮಾಣ ಕೈಗೊಂಡಲ್ಲಿ, ಯೋಜನಾ ಪ್ರಾಧಿಕಾರವು ನೀಡಿರುವ ಅನುಮೋದನೆಯು ತನ್ನಿಂದ ತಾನೇ ಸ್ವಯಂ ಚಾಲಿತವಾಗಿ ರದ್ದಾಗುತ್ತದೆ.
19. ಅನುಮೋದಿತ ನಕ್ಷೆಯ ವಿವರಗಳು ಈ ಕೆಳಗಿನಂತಿರುತ್ತದೆ.

| ವಿವರಗಳು | ವಲಯ ನಿಯಮದಂತೆ | ನಕ್ಷೆಯಂತೆ |
|---|---|---|
| ನಡುಜಾಗ: | | |
| (ಉತ್ತರ) ಮುಂಭಾಗ: | 5.00 ಮೀ. | 17.11 ಮೀ. |
| (ದಕ್ಷಿಣ) ಮುಂಭಾಗ: | 5.00 ಮೀ. | 8.24 ಮೀ. |
| (ಪೂರ್ವ) ಮುಂಭಾಗ: | 5.00 ಮೀ. | 6.74 ಮೀ. |
| (ಪಶ್ಚಿಮ) ಹಿಂಭಾಗ: | 5.00 ಮೀ. | 6.78 ಮೀ. |

ದೂರವಾಣಿ ಸಂ : 080 2956 2046

# ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ

ಎಸ್.ಎನ್. ಕಾಂಪ್ಲೆಕ್ಸ್, ಮೊದಲನೇ ಮಹಡಿ, ನಗರ ಪೋಲಿಸ್ ಠಾಣೆ ಎದುರು, 'ಡಿ' ಕ್ರಾಸ್, ದೊಡ್ಡಬಳ್ಳಾಪುರ-561203.

| | | |
|---|---|---|
| ಕಟ್ಟಡದ ಆವರಿಸುವಿಕೆ (Coverage) | -- | 20.08% |
| Floor Area Ratio | 5.00 | 0.73 |
| ವಾಹನ ನಿಲುಗಡೆ | 24ನಂ. | 24 ನಂ. |
| ದ್ವಿಚಕ್ರ ವಾಹನ ನಿಲುಗಡೆ (25% of Car Parking) | 75.63 ಚ.ಮೀ | 96.82 ಚ.ಮೀ |
| ಕಟ್ಟಡದ ಎತ್ತರ | 15.00 ಮೀ. | 12.60 ಮೀಟರ್ |

**ಕಟ್ಟಡ ವಿಸ್ತೀರ್ಣ ವಿವರ (ಒಟ್ಟಾರೆ ಬ್ಲಾಕ್-ಎ + ಬ್ಲಾಕ್ -ಬಿ ಕಟ್ಟಡ ವಿಸ್ತೀರ್ಣ)**

| ವಿವರ | ಒಟ್ಟಾರೆ ವಿಸ್ತೀರ್ಣ | ಕಳಿಕೆ | ಎಫ್.ಎ.ಆರ್ ವಿಸ್ತೀರ್ಣ |
|---|---|---|---|
| ನೆಲ ಅಂತಸ್ತು : | 1313.72 ಚ.ಮೀ. | 48.20 ಚ.ಮೀ. | 1265.52 ಚ.ಮೀ. |
| ಮೊದಲನೇ ಅಂತಸ್ತು : | 1313.72 ಚ.ಮೀ. | 48.20 ಚ.ಮೀ. | 1265.52 ಚ.ಮೀ. |
| ಎರಡನೇ ಅಂತಸ್ತು : | 1313.72 ಚ.ಮೀ. | 48.20 ಚ.ಮೀ. | 1265.52 ಚ.ಮೀ. |
| ಮೂರನೇ ಅಂತಸ್ತು : | 1313.72 ಚ.ಮೀ. | 48.20 ಚ.ಮೀ. | 1265.52 ಚ.ಮೀ. |
| ಟೆರೆಸ್ : | 50.28 ಚ.ಮೀ. | 50.28 ಚ.ಮೀ. | 0.00 ಚ.ಮೀ. |
| **ಒಟ್ಟು** | **5305.16 ಚ.ಮೀ.** | **243.08 ಚ.ಮೀ.** | **5062.08 ಚ.ಮೀ.** |

ಮೇಲಿನಂತೆ ನೀಡಲಾಗಿರುವ ಅನುಮತಿಗೆ ವ್ಯತಿರಿಕ್ತವಾಗಿ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಕೈಗೊಂಡಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಸೆಕ್ಷನ್ 15(4) ರ ಅಡಿಯಲ್ಲಿ ಅಗತ್ಯ ಕ್ರಮ ಜರುಗಿಸಲಾಗುವುದು.

02/09/2021

ಸದಸ್ಯ ಕಾರ್ಯದರ್ಶಿಗಳು,
ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ,
ದೊಡ್ಡಬಳ್ಳಾಪುರ.
2.9.21

ಇವರಿಗೆ:

**ಮುಖ್ಯ ಅಭಿಯಂತರರು**
ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ,
ಕಾವೇರಿಭವನ, 9 ನೇ ಮಹಡಿ, 'ಇ' ಮತ್ತು 'ಎಫ್' ಬ್ಲಾಕ್,
ಕೆಂಪೇಗೌಡ ರಸ್ತೆ, ಬೆಂಗಳೂರು – 560009.